**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 516/2025**

| | |
|---|---|
| ಹೆಸರು | :ಮೂಸನ್ ಖಲೀಲ್ |
| ತಂದೆಯ ಹೆಸರು | :ಎಸ್.ಮೊಹಮ್ಮದ್ |
| ಪ್ರಾಯ | :44 ವರ್ಷ |
| ಉದ್ಯೋಗ | :ವ್ಯಾಪಾರ |
| ವಾಸ | :ಗೂನಡ್ಕ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 22.01.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನನಗೆ ಚಾಸಾ-1, 3 ಮತ್ತು 4 ರವರ ಪರಿಚಯ ಇದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇದೆ. ದಿ. 23.3.2025 ರಂದು ಬೆಳಿಗ್ಗೆ 11.45 ಗಂಟೆ ಸಮಯದಲ್ಲಿ ನಾನು ಸುಳ್ಯ ಪೇಟೆಯಿಂದ ಗೂನಡ್ಕದ ಪೆರುಂಗೋಡಿ ಯಲ್ಲಿರುವ ನನ್ನ ಮನೆ ಕಡೆ ಹೋಗುತ್ತಿರುವಾಗ ಕಲ್ಲುಗುಂಡಿ ಕಡೆಯಿಂದ ಒಂದು ಟಿಪ್ಪರ್ ಲಾರಿಯಲ್ಲಿ ಮಣ್ಣು ತುಂಬಿಕೊಂಡು ಚಾಸಾ-4ರವರಿಗೆ ಸೇರಿದ ಸಜ್ಜನ ಸಭಾಭವನದ ಗೇಟ್ ಒಳಗಡೆ ಹೋಗುತ್ತಿತ್ತು. ಸದರಿ ಸಜ್ಜನ ಸಭಾಭವನದ ಹಿಂದೆ ಆರೋಪಿ ಸನತ್ ರವರ ತೋಟ ಇದ್ದು ಸದರಿ ತೋಟದಲ್ಲಿರುವ ಬಾವಿಯನ್ನು ಮುಚ್ಚುವ ಸಲುವಾಗಿ ಸನತ್ ರವರು ಸಭಾಭವನದ ಮುಂಭಾಗದಿಂದ ಮಣ್ಣನ್ನು ಸಾಗಿಸಿರುತ್ತಾರೆ. ಮಾರನೇ ದಿನ ಚಾಸಾ-1 ರವರು ನನಗೆ ಫೋನ್ ಮಾಡಿ ನಮ್ಮ

ಸಭಾಭವನದ ಹಾಲ್‌ನ ಎದುರು ಇರುವ ಇಂಟರ್ ಲಾಕ್‌ನ ಮೂಲಕ ಮಣ್ಣನ್ನು ಸಾಗಾಟ ಮಾಡಿದ್ದು, ಇದರಿಂದ ಇಂಟರ್ ಲಾಕ್ ಹಾಳಾಗಿದೆ ಎಂದು ತಿಳಿಸಿರುತ್ತಾರೆ. ಆಗ ನಾನು ಸನತ್ ರವರು ಟಿಪ್ಪರ್ ಮೂಲಕ ಮಣ್ಣು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತೇನೆ. ಸನತ್ ರವರು ನಿಮ್ಮ ಅನುಮತಿ ಪಡೆದು ಮಣ್ಣು ಸಾಗಾಟ ಮಾಡಿದ್ದಾರಾ ಎಂದು ಕೇಳಿದಾಗ ಚಾಸಾ-1 ರವರು ನಮ್ಮಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆ ರೀತಿ ಮಣ್ಣು ಸಾಗಾಟ ಮಾಡಿರುವುದರಿಂದ ಸಭಾಭವನದ ಮುಂಭಾಗದಲ್ಲಿರುವ ಇಂಟರ್ ಲಾಕ್ ಹಾಳಾಗಿದ್ದು ಇದರಿಂದ ಚಾಸಾ-4 ರವರಿಗೆ ಸುಮಾರು ಒಂದು ಲಕ್ಷ ನಷ್ಟ ಆಗಿರುತ್ತದೆ ಎಂದು ಚಾಸಾ-1 ರವರು ತಿಳಿಸಿರುತ್ತಾರೆ. ನಾನು ಸದರಿ ಸಭಾಭವನದ ಬಳಿ ಹೋಗಿ ನೋಡಲಾಗಿ ಅಲ್ಲಿ ಟಿಪ್ಪರ್ ನಲ್ಲಿ ಮಣ್ಣು ಸಾಗಿಸಿದ್ದರಿಂದ ಇಂಟರ್ ಲಾಕ್ ಹಾಳಾಗಿರುತ್ತದೆ, ಮಣ್ಣು ಸಾಗಾಟ ಮಾಡಿದ ಟಿಪ್ಪರ್ ಕೆಎ-21-ಸಿ-2785 ಆಗಿರುತ್ತದೆ. ಘಟನೆ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಮಣ್ಣು ಸಾಗಾಟ ಮಾಡಿದ ಲಾರಿಯನ್ನು ಈಗ ನ್ಯಾಯಾಲಯದ ಮುಂದೆ ಭಾವಚಿತ್ರದಲ್ಲಿ ನೋಡಿ ಗುರುತಿಸುತ್ತೇನೆ. ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

ನನಗೆ ಮೊದಲಿನಿಂದಲೂ ಆರೋಪಿತನ ಪರಿಚಯ ಇರುತ್ತದೆ. ಆರೋಪಿ ಮತ್ತು ಚಾಸಾ-1 ರವರು ನೆರೆಕರೆಯವರು, ಅವರು ಮೊದಲು ಅನ್ಯೋನ್ಯವಾಗಿದ್ದರು ಎಂದರೆ ಸರಿ. ಚಾಸಾ-1 ರವರು ನನ್ನ ಸಂಬಂಧಿಕರು ಮತ್ತು ಪರಿಚಯದವರು ಆಗಿರುತ್ತಾರೆ. ನಾನು ಮತ್ತು ಚಾಸಾ-1 ರವರರು ಸಾಮಾನ್ಯವಾಗಿ ಒಟ್ಟಿಗೆ ಇರುತ್ತೇವೆ ಎಂದರೆ ಸರಿ. ನನಗೆ ಟಿ.ಎಂ.ಶಹೀದ್ ಎಂಬುವವರ ಪರಿಚಯ ಇದೆ. ಚಾಸಾ-4 ರವರ ಸಭಾಭವನದಿಂದ ಸುಮಾರು 1 ಕಿ.ಮೀ ಒಳಗೆ ಶಹೀದ್ ರವರ ಜಾಗ ಇರುತ್ತದೆ. ಶಹೀದ್ ರವರು ತಮ್ಮ ಗುಡ್ಡೆ ಜಾಗವನ್ನು ಸಮತಟ್ಟು ಮಾಡುತ್ತಿದ್ದರು ಎಂದರೆ ನನಗೆ

ಗೊತ್ತಿಲ್ಲ. ಟಿಪ್ಪರ್ ಲಾರಿಯಲ್ಲಿ ಆರೋಪಿಯ ತೋಟಕ್ಕೆ ಮಣ್ಣು ಸಾಗಾಟ ಮಾಡುತ್ತಿದ್ದುದನ್ನು ನಾನು ನೋಡಿರುತ್ತೇನೆ. ನಾನು ಟಿಪ್ಪರ್ ಲಾರಿಯಲ್ಲಿ ಮಣ್ಣು ಸಾಗಾಟ ಮಾಡುವುದನ್ನು ಸ್ವತಃ ನೋಡಿರುತ್ತೇನೆ. ಮಣ್ಣು ಸಾಗಾಟ ಮಾಡಿ ಇಂಟರ್ ಲಾಕ್ ಹಾಳಾಗಿರುವ ವಿಚಾರವನ್ನು ನನಗೆ ಬೇರೆಯವರಿಂದ ತಿಳಿಯಿತು ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಸನತ್ ತಮ್ಮ ತೋಟದ ಹಳೇ ಬಾವಿಯನ್ನು ಮುಚ್ಚಲು ಉಮ್ಮರ್ ರವರ ಅನುಮತಿ ಪಡೆದು ಉಮ್ಮರ್ ರವರ ಸಜ್ಜನ ಸಭಾಭನದ ಹಾಲ್ ನ ಎದುರು ಇರುವ ಇಂಟರ್ ಲಾಕ್ ನ ಮೂಲಕ ಮಣ್ಣನ್ನು ಸಾಗಿಸಿರಬಹುದೆಂದು ಭಾವಿಸಿರುತ್ತೇನೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆಮೇಲೆ ವಿಚಾರ ತಿಳಿದು ಸ್ಥಳಕ್ಕೆ ಹೋಗಿ ನೋಡಲಾಗಿ ಟಿಪ್ಪರ್ ಲಾರಿಯಲ್ಲಿ ಮಣ್ಣು ಸಾಗಿಸಿ ಇಂಟರ್ ಲಾಕ್ ಹಾಳಾಗಿರುವುದನ್ನು ನೋಡಿರುತ್ತೇನೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಮಾಧವಗೌಡ, ಚಾಸಾ–4 ಮತ್ತು ಆರೋಪಿತರ ಜಮೀನಿನ ನಡುವೆ ಕೆಂಪು ಕಲ್ಲಿನ ಕಾಂಪೌಂಡ್ ಇದೆ ಎಂದರೆ ಸರಿ. ಆದರೆ ಅದು ಪೂರ್ಣವಾಗಿರುವುದಿಲ್ಲ. ಅದನ್ನು ಅಡಿಪಾಯದಿಂದಲೇ ಕಟ್ಟಿರುತ್ತಾರೆ ಎಂದರೆ ಸರಿ. ಜೆ.ಸಿ.ಬಿ ಮೂಲಕ ಅಡಿಪಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ–1 ರವರ ಜಮೀನಿನ ಹೊಳೆ ಬದಿಯಲ್ಲಿ ಕೆಲಸ ಮಾಡುವುದನ್ನು ನಾನು ನೋಡಿರುತ್ತೇನೆ. ಅಲ್ಲಿ ಕಗ್ಗಲ್ಲಿನಿಂದ ಕಾಂಪೌಂಡ್ ಕಟ್ಟಿರುತ್ತಾರೆ ಎಂದರೆ ಸರಿ. ಕಬ್ಬಿಣ ಮತ್ತು ಸಿಮೆಂಟ್ ನಿಂದ ಅದನ್ನು ಕಟ್ಟಿದ್ದಾರೆ ಎಂದರೆ ಸರಿ. ಅಲ್ಲಿ 20 ಲೋಡ್ ಕಲ್ಲು ಹೋಗಿದೆ ಎಂದರೆ ಸರಿಯಲ್ಲ. 10 ಲೋಡ್ ಹೋಗಿರಬಹುದು. ಅದನ್ನು ಪಿಕ್ ಅಪ್ ನಿಂದ ಸಾಗಾಟ ಮಾಡಿರುತ್ತಾರೆ. ಅದನ್ನು ಆರೋಪಿ ಮಣ್ಣು ಸಾಗಾಟ ಮಾಡುವ ಒಂದು ತಿಂಗಳ ಮೊದಲೇ ಸಾಗಾಟ ಮಾಡಿರುತ್ತಾರೆ. ಮಣ್ಣನ್ನು ಸಾಗಾಟ ಮಾಡಲು ಹಾಲ್ ನ ಎದುರು ಇಂಟರ್ ಲಾಕ್ ಮೂಲಕವೇ ಹೋಗಬೇಕು ಎಂದರೆ ಸರಿಯಲ್ಲ. ಸದರಿ ಇಂಟರ್ ಲಾಕ್ ಅಳವಡಿಸಿ

ಸುಮಾರು 2 ವರ್ಷ ಆಗಿರುತ್ತದೆ. ಆರೋಪಿ ತನ್ನ ಜಾಗದಲ್ಲೇ ಮಣ್ಣನ್ನು ಸಾಗಾಟ ಮಾಡಬಹುದಿತ್ತು. ನಿಪಿ–4 ಮತ್ತು 5ರಲ್ಲಿ ಇಂಟರ್ ಲಾಕ್ ಹಾಕದೇ ಇರುವ ಖಾಲಿ ಜಾಗ ಇಲ್ಲ ಎಂದರೆ ಸರಿ. ಚಾಸಾ–1 ರವರ ಇಂಟರ್ ಲಾಕ್ ಫ್ಯಾಕ್ಟರಿ ಇರುವ ಸ್ಥಳಕ್ಕೆ ಸಾಮಗ್ರಿಗಳನ್ನು ಅನ್ ಲೋಡ್ ಮಾಡಲು ಬರುವ ವಾಹನಗಳು ಸಭಾಭವನದ ಅಂಗಳಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ನಿಪಿ–4 ಮತ್ತು 5 ರಲ್ಲಿ ಸ್ವಲ್ಪ ತಗ್ಗಿದಾಗೆ ಕಾಣುವುದನ್ನು ಹೊರತು ಪಡಿಸಿ ಇಂಟರ್ ಲಾಕ್‌ಗಳಿಗೆ ಯಾವುದೇ ಹಾನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಇಂಟರ್ ಲಾಕ್ ಅಳವಡಿಸಿದ್ದ ಜಾಗ ತಗ್ಗು ಉಂಟಾದಲ್ಲಿ ಅದರ ಅಡಿಭಾಗದಲ್ಲಿರುವ ಜಲ್ಲಿಕಲು ಮತ್ತು ಮರಳನ್ನು ತೆಗೆದು ಅದಕ್ಕೆ ಹೊಸದಾಗಿ ಸಮತಟ್ಟು ಮಾಡಬಹುದು ಎಂದರೆ ಸರಿ. ಆದರೆ ಹೊಡೆದು ಹೋದ ಇಂಟರ್ ಲಾಕನ್ನು ಹೊಸದಾಗಿ ಅಳವಡಿಸಬೇಕಾಗುತ್ತದೆ. ಚಾಸಾ–4 ರವರ ಅನುಮತಿ ಪಡೆಯದೇ ಟಿಪ್ಪರ್ ನಲ್ಲಿ ಮಣ್ಣು ಸಾಗಾಟ ಮಾಡಿರುವುದಾಗಿ ನನಗೆ ದಿನಾಂಕ 24 ರಂದು ಗೊತ್ತಾಗಿರುತ್ತದೆ. ಆರೋಪಿ ತನ್ನ ತೋಟದಲ್ಲಿದ್ದ ಹಳೆಯ ಬಾವಿಯನ್ನು ಮುಚ್ಚುವ ಸಮಯದಲ್ಲಿ ಚಾಸಾ–4 ರವರ ಅನುಮತಿಯ ಮೇರೆಗೆ ಟಿಪ್ಪರ್ ನಲ್ಲಿ ಕೇವಲ 5–6 ಲೋಡ್ ಮಣ್ಣನ್ನು ಸಾಗಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆ ರೀತಿ 2 ದಿನಗಳ ಕಾಲ ಸಾಗಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಕಾಂಪೌಂಡ್ ಕಟ್ಟುವ ವಿಚಾರವಾಗಿ ಚಾಸಾ–1 ಮತ್ತು ಆರೋಪಿತರ ನಡುವೆ ಮಾತುಕತೆಯಾಗಿತ್ತು ಎಂದರೆ ಸರಿ. ಹಣ ನೀಡುವ ವಿಚಾರವಾಗಿ ಚಾಸಾ–1 ಮತ್ತು ಆರೋಪಿತರ ನಡುವೆ ವಿವಾದ ಇತ್ತು ಎಂದರೆ ಸರಿಯಲ್ಲ. ಕಾಂಪೌಂಡ್ ವಿಚಾರಕ್ಕೆ ಹಣ ಕೊಡದ ಕಾರಣ ಚಾಸಾ–1 ರವರು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮಣ್ಣು ಸಾಗಾಟ ಮಾಡಿದ್ದರಿಂದ ಇಂಟರ್ ಲಾಕ್ ಗೆ ಯಾವುದೇ ಹಾನಿಯಾಗಿರುವುದಿಲ್ಲ, ಚಾಸಾ–1 ರವರು ಕಗ್ಗಲ್ಲನ್ನು ಸಾಗಾಟ

ಮಾಡಿರುವುದರಿಂದ ಆ ರೀತಿ ಇಂಟರ್ ಲಾಕ್ ಹಾನಿಯಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ–1 ರವರು ನನಗೆ ಸ್ನೇಹಿತರಾಗಿದ್ದ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ